MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - WEDNESDAY 13-7-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಜೂನ್ ಅಂತ್ಯದಲ್ಲಿ ಮಲೇಶ್ಯಾ ಪಾಮೆಣ್ಣೆ ದಾಸ್ತಾನು ಹಿಂದಿನ 7 ತಿಂಗಳ ಗರಿಷ್ಠ ಮಟ್ಟಕ್ಕೆ

2022 ರ ಜೂನ್ ಅಂತ್ಯದಲ್ಲಿ ಮಲೇಶ್ಯಾದ ಪಾಮೆಣ್ಣೆ ದಾಸ್ತಾನು ಹಿಂದಿನ ತಿಂಗಳಿಗಿಂತ 8.76 ಶೇಕಡಾ ಹೆಚ್ಚಳವಾಗಿದ್ದು 1.66 ಮಿಲಿಯನ್ ಟನ್‌ಗಳಿಗೇರಿದೆಯೆಂದು ಹಿಂದಿನ ನವೆಂಬರ್(2021) ನಂತರ ಇದು ಗರಿಷ್ಠ ಏರಿಕೆಯೆಂದು MPOB (ಮಲೇಶಿಯನ್ ಪಾಮ್ ಆಯಿಲ್ ಬೋರ್ಡ್ ) ಪ್ರಕಟಿಸಿದೆ.

## ಗೋಧಿ, ಜೋಳ ದರ ಹೆಚ್ಚಳ

ದಾಸ್ತಾನುದಾರರು, ಮಿಲ್‌ಗಳಿಂದ ಹೆಚ್ಚಿನ ಬೇಡಿಕೆಯಿಂದ ಗೋಧಿ ದರ ಹೆಚ್ಚಳವಾಗಿದೆ. ಆವಕ ಇಳಿಕೆಯಿಂದ ಬಿಹಾರದಲ್ಲಿ ಜೋಳ ದರ ಹೆಚ್ಚಳವಾಗಿದೆ. ದಾವಣಗೆರೆಯಲ್ಲಿ ದರ ಸ್ಥಿರವಿದೆಯೆನ್ನಲಾಗಿದೆ.

## ಪಾಮೆಣ್ಣೆ, ಖಾದ್ಯ ತೈಲ ದರ ಇನ್ನೂ ಇಳಿಕೆ ಸಾಧ್ಯತೆ

ಉತ್ಪಾದಕ ದೇಶಗಳಾದ ಇಂಡೋನೇಶಿಯಾ, ಮಲೇಶಿಯಾಗಳಲ್ಲಿ ಪಾಮೆಣ್ಣೆ ದಾಸ್ತಾನು ಹೆಚ್ಚಳವಾಗಿರುವುದು. ಚೀನಾ ದೇಶದ ಖಾದ್ಯತೈಲ ಆಮದು ತೀವ್ರ ಇಳಿಕೆಯಾಗಿರುವುದರಿಂದ ಪಾಮೆಣ್ಣೆ ದರ ಇನ್ನೂ ಇಳಿಕೆಯಾಗುವ ಸಾಧ್ಯತೆ ಇದೆ. ಸೋಯಾಬೀನ್ ಎಣ್ಣೆಗೆ ಹೋಲಿಸಿದಾಗ ಪಾಮೆಣ್ಣೆ ದರ ಈಗ ಕಡಿಮೆ ಇರುವುದರಿಂದ ಪಾಮೆಣ್ಣೆಗೆ ಬೇಡಿಕೆ ಹೆಚ್ಚಿ ಸೋಯಾಬೀನ್ ಎಣ್ಣೆ ಬೇಡಿಕೆ ಇಳಿಕೆಯಾಗುವ ಸಂಭವವಿದ್ದು, ಅದರ ದರವೂ ಇಳಿಕೆಯಾಗಬಹುದು. ಸೂರ್ಯಕಾಂತಿ ಎಣ್ಣೆ ದರವೂ ಇಳಿಕೆಯಾಗಿರುವುದರಿಂದ ಸದ್ಯ ಹೆಚ್ಚಿನ ಖಾದ್ಯತೈಲ ದರಗಳು ಇನ್ನೂ ಇಳಿಕೆಯಾಗುವ ಸಾಧ್ಯತೆ ಇದೆ.

## ಭತ್ತ ಬಿತ್ತನೆ 24 ಶೇಕಡಾ ಇಳಿಕೆ

ಹಿಂದಿನ ವರ್ಷಕ್ಕೆ ಹೋಲಿಸಿದಾಗ ಪ್ರಮುಖ ಭತ್ತ ಬೆಳೆಯುವ ರಾಜ್ಯಗಳಲ್ಲಿ ಒಟ್ಟು ಭತ್ತ ಬಿತ್ತನೆ ಪ್ರದೇಶ ಈ ವರ್ಷ ಇದುವರೆಗೆ 24 ಶೇಕಡಾ ಇಳಿಕೆಯಾಗಿದೆಯೆನ್ನಲಾಗಿದೆ. ಮುಂಗಾರು ವಿಳಂಬದಿಂದ ಬಿತ್ತನೆ ವಿಳಂಬ ಹಾಗೂ ಪ್ರದೇಶ(ವಿಸ್ತೀರ್ಣ) ಇಳಿಕೆಯಾಗಿದೆಯೆನ್ನಲಾಗಿದ್ದು ಮುಂದಿನ ದಿನಗಳಲ್ಲಿ ಬಿತ್ತನೆ ಪ್ರದೇಶಗಳಲ್ಲಿ ಪ್ರಗತಿಯಾಗುವ ಸಾಧ್ಯತೆ ಇದೆ.